**ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ನಂ.1, ಎಲ್.ಆರ್.ಡಿ.ಇ. ಕಟ್ಟಡ, ಅಲಿ ಅಸ್ಕರ್‌ರಸ್ತೆ,
ಬೆಂಗಳೂರು–560 052.
Tel: 080-22263479[EPBAX]
Website: www.bmrda.karnataka.gov.in

## ನಾಗರೀಕ ಸನ್ನದ್ದು

**ಪೀಠಿಕೆ:**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು 1985ರಲ್ಲಿ ಸ್ಥಾಪಿಸಲ್ಪಟ್ಟಿದೆ. ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿನ ಪಟ್ಟಣ ಮತ್ತು ಗ್ರಾಮಗಳ ವ್ಯವಸ್ಥಿತ ಬೆಳವಣಿಗೆಗಾಗಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಯೋಜನೆಗಳನ್ನು ಸಮರ್ಪಕವಾಗಿ ಕಾರ್ಯಗತಗೊಳಿಸುವಲ್ಲಿ ಅಗತ್ಯವಾದ ತಾಂತ್ರಿಕ ನೆರವನ್ನು ಈ ಪ್ರಾಧಿಕಾರವು ಯೋಜನಾ ಪ್ರಾಧಿಕಾರಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನೀಡುವುದು ಪ್ರಮುಖ ಚಟುವಟಿಕೆಯಾಗಿರುತ್ತದೆ.

**ಆಡಳಿತ ಮತ್ತು ಕಂದಾಯ ಶಾಖೆಯ ಕಾರ್ಯಗಳು :**

- ಪ್ರಾಧೀಕಾರದ ಎಲ್ಲಾ ಆಡಳಿತಾತ್ಮಕ ಕಾರ್ಯಗಳು.
- ಪ್ರಾಧಿಕಾರದ ಯೋಜನೆಗಳಿಗೆ ಭೂಸ್ವಾಧೀನಕ್ಕೆ ಸಂಬಂಧಿಸಿದ ಕಾರ್ಯಗಳು.

**ನಗರ ಯೋಜನಾ ಶಾಖೆಯ ಕಾರ್ಯ ಚಟುವಟಿಕೆಗಳು:**

- ಸರ್ಕಾರಕ್ಕೆ ಹಾಗೂ ಯೋಜನಾ ಪ್ರಾಧಿಕಾರಗಳಿಗೆ ಪ್ರಾದೇಶಿಕ ಯೋಜನೆ ಕುರಿತು ಸೂಕ್ತ ಸಲಹೆಗಳನ್ನು ನೀಡುವುದು.
- ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು.
- ಸರ್ಕಾರದ ವಿವಿಧ ಇಲಾಖೆಗಳಿಗೆ ಪ್ರಾದೇಶಿಕ ಯೋಜನೆ/ನಗರ ಯೋಜನೆ ಕುರಿತು ತಾಂತ್ರಿಕ ಸಹಾಯ ನೀಡುವುದು
- ಈ ಪ್ರಾಧಿಕಾರದಲ್ಲಿ ವ್ಯಾಪ್ತಿಯಲ್ಲಿರುವ ಸ್ಥಳೀಯ ಯೋಜನಾ ಪ್ರಾಧಿಕಾರಗಳಿಗೆ ತಾಂತ್ರಿಕ ನೆರವು ನೀಡುವುದು.
- ಪುನರ್ವಸತಿ, ಪುನರ್ ನಿರ್ಮಾಣ ಹಾಗೂ ಸಂಚಾರ ನಿರ್ವಹಣೆ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಯೋಜನೆ ಕೈಗೊಂಡು ಯೋಜನಾಬದ್ಧ ಬೆಳವಣಿಗೆಗಳಿಗೆ ಯೋಜನೆಗಳನ್ನು ತಯಾರಿಸುವುದು/ತಾಂತ್ರಿಕ ನೆರವು ನೀಡುವುದು.
- ಅಭಿವೃದ್ಧಿ ಯೋಜನೆ ಪ್ರಸ್ತಾವನೆಗಳ ತಯಾರಿಕೆ ಹಾಗೂ ಅನುಷ್ಠಾನಗೊಳಿಸುವ ಕುರಿತು ವಿವಿಧ ಯೋಜನಾ ಪ್ರಾಧಿಕಾರಗಳು, ನಗರ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ನೆರವು ನೀಡುವುದು.
- ನಗರದ ಸೌಂದರ್ಯ ಕಾಪಾಡಲು ಮತ್ತು ವೃದ್ಧಿಗೊಳಿಸಲು ಯೋಜನೆಗಳನ್ನು ರೂಪಿಸುವಲ್ಲಿ ಸಲಹೆ ನೀಡುವುದು.
- ಕೆರೆ ಸಂರಕ್ಷಣಾ ಅಭಿವೃದ್ಧಿ ಕಾರ್ಯಗಳಿಗೆ ತಾಂತ್ರಿಕ ನೆರವು ನೀಡುವುದು.
- ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶಗಳಿಂದ ಬರುವ ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ತಾಂತ್ರಿಕ ಅಭಿಪ್ರಾಯ ನೀಡುವುದು.

**ಲೆಕ್ಕ ಶಾಖೆಯ ಕಾರ್ಯಗಳು:**

- ಈ ಪ್ರಾಧಿಕಾರದ ಎಲ್ಲಾ ಲೆಕ್ಕಕ್ಕೆ ಸಂಬಂಧಿಸಿದ ಕಾರ್ಯಗಳು.
- ಪ್ರಾಧಿಕಾರದ ಆಯವ್ಯಯ ಪತ್ರ ತಯಾರಿಕೆ ಮತ್ತು ಎಲ್ಲಾ ವೆಚ್ಚಗಳ ಕಾರ್ಯಗಳು.

**ಪ್ರಾಧಿಕಾರದ ಧ್ಯೇಯೋದ್ದೇಶಗಳು:**

- ಬೆಂಗಳೂರು ಮಹಾನಗರ ಪ್ರದೇಶಕ್ಕೆ ರಚನಾ ನಕ್ಷೆ ತಯಾರಿಸುವುದು.
- ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ಸ್ಥಳೀಯ ಯೋಜನಾ ಪ್ರದೇಶಗಳಿಗೆ ವೈಜ್ಞಾನಿಕ ರೀತಿಯಲ್ಲಿ ಮೂಲ ನಕ್ಷೆಯನ್ನು ತಯಾರಿಸುವುದು.
- ಯೋಜನಾ ಪ್ರಾಧಿಕಾರಗಳಿಂದ ತಯಾರಿಸುವ ಮಹಾಯೋಜನೆಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ, ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.
- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
- ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳಲ್ಲಿ ಸರ್ಕಾರಕ್ಕೆ ತಾಂತ್ರಿಕ ಅಭಿಪ್ರಾಯ ನೀಡುವುದು.

**ಸಾರ್ವಜನಿಕ ಸಹಭಾಗಿತ್ವ:**

ಯೋಜನಾ ಪ್ರಾಧಿಕಾರಗಳ ಮತ್ತು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಟ್ಟದಲ್ಲಿ ಯೋಜನೆಗಳನ್ನು ತಯಾರಿಸುವಾಗ ನಾಗರೀಕರ ಅಭಿಪ್ರಾಯಗಳು ಅತ್ಯಾವಶ್ಯಕವಾಗಿರುತ್ತದೆ. ಸಾರ್ವಜನಿಕ ಆಕ್ಷೇಪಣೆ/ಸಲಹೆಗಳನ್ನು ಮಹಾಯೋಜನೆಗಳನ್ನು ತಯಾರಿಸುವಾಗ ಪಡೆಯಲಾಗುತ್ತಿದೆ.

**ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಯೋಜನಾ ಪ್ರಾಧಿಕಾರಗಳು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಪಟ್ಟಿ:**

1. ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ
2. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ
3. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
4. ಆನೇಕಲ್ ಯೋಜನಾ ಪ್ರಾಧಿಕಾರ
5. ಹೊಸಕೋಟೆ ಯೋಜನಾ ಪ್ರಾಧಿಕಾರ
6. ಕನಕಪುರ ಯೋಜನಾ ಪ್ರಾಧಿಕಾರ
7. ಮಾಗಡಿ ಯೋಜನಾ ಪ್ರಾಧಿಕಾರ
8. ನೆಲಮಂಗಲ ಯೋಜನಾ ಪ್ರಾಧಿಕಾರ
9. ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
10. ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ
11. ಚನ್ನಪಟ್ಟಣ ಯೋಜನಾ ಪ್ರಾಧಿಕಾರ

**ಭವಿಷ್ಯದ ಧ್ಯೇಯ ಹಾಗೂ ಉದ್ದೇಶಗಳು:**

- ಬೆಂಗಳೂರು ಮಹಾನಗರ ಪ್ರದೇಶದಲ್ಲಿ ತ್ವರಿತ ಸಾಮೂಹಿಕ ಸಾರಿಗೆ ವ್ಯವಸ್ಥೆ ಯೋಜನೆ ರೂಪಿಸುವುದು
- ಬೆಂಗಳೂರು ಮಹಾನಗರ ಪ್ರದೇಶಕ್ಕೆ ಸಾರಿಗೆ ವ್ಯವಸ್ಥೆ ಯೋಜನೆ ತಯಾರಿಸುವುದು.
- ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಉದ್ದೇಶಿಸಿರುವ STRR, IRR, TRR, RR ರಸ್ತೆಗಳ ನಿರ್ವಹಣೆ ಯೋಜನೆಗಳು.
- ಯೋಜನಾ ಪ್ರಾಧಿಕಾರಗಳು ಮಹಾಯೋಜನೆ ತಯಾರಿಸಲು ತಾಂತ್ರಿಕ ನೆರವು ನೀಡುವುದು.
- ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಬರುವ ಕೆರೆಗಳ ಸಂರಕ್ಷಣೆ ಕುರಿತು ಯೋಜನೆ
- ಯೋಜನೆಗಳ ಕಾರ್ಯ ಸಾಧ್ಯ (Feasibility) ಅಧ್ಯಯನ.

ಈ ನಾಗರೀಕ ಸನ್ನದ್ದಿನಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ನೀಡುವ ಸೇವೆಗಳ ಜವಾಬ್ದಾರಿ ಮತ್ತು ಸಾರ್ವಜನಿಕರಿಗೆ ಸೇವೆಗಳನ್ನು ನೀಡಲು ನಿಗಧಿಪಡಿಸಿದ ಕಾಲಾವಧಿಯ ಗುರಿಯ ಸಂಕ್ಷಿಪ್ತ ವಿವರಗಳನ್ನು ನೀಡಲಾಗಿದೆ.

# ಅಧಿಕಾರಿಗಳ ಪಟ್ಟಿ ಮತ್ತು ಅವರ ಕರ್ತವ್ಯಗಳು

| ಕ್ರ. ಸಂ | ಹುದ್ದೆ | ಅಧಿಕಾರಿಯು ಒದಗಿಸುವ ಸೇವೆಯ ಸಂಕ್ಷಿಪ್ತ ವಿವರ | ಕಛೇರಿ ದೂರವಾಣಿ ಸಂಖ್ಯೆ | ಕೆಲಸದ ದಿನಗಳಲ್ಲಿ ಭೇಟಿಯ ಸಮಯ | ಇ-ಮೇಲ್ ವಿಳಾಸ |
|---|---|---|---|---|---|
| 1 | ಮಹಾನಗರ ಆಯುಕ್ತರು | ಪ್ರಾಧಿಕಾರದ ಮುಖ್ಯ ನಿರ್ವಹಣಾ ಅಧಿಕಾರಿ | 080–22255493 | 3–00 pm to 5-00 pm | mc-bmrda@kar.nic.in<br>mc.bmrda@ka.gov.in |
| 2 | ಮಹಾನಗರ ಯೋಜಕರು ಹಾಗೂ ನ.ಗ್ರಾ.ಯೋ ನಿರ್ದೇಶಕರು | ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳಲ್ಲಿ ಮಹಾನಗರ ಆಯುಕ್ತರಿಗೆ ನೆರವು ನೀಡುವುದು | 080–22267214 | 3–00 pm to 5-00 pm | bmrda.tp1985@gmail.com |
| 3 | ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು | ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು. | 080–22267214 | 3–00 pm to 5-00 pm | - |
| 4 | ಅಪರ ಮಹಾನಗರ ಆಯುಕ್ತರು | ಈ ಪ್ರಾಧಿಕಾರದ ಉದ್ದೇಶಿಸಿರುವ ಉಪನಗರಗಳ ಮತ್ತು ರಸ್ತೆಗಳ ಯೋಜನೆಗಳ ಕಾರ್ಯಗಳಲ್ಲಿ ಮಹಾನಗರ ಆಯುಕ್ತರಿಗೆ ಸಹಾಯ ಮಾಡುವುದು ಹಾಗೂ ಪ್ರಾಧಿಕಾರದ ಆಡಳಿತ ಮತ್ತು ಕಂದಾಯ ವಿಚಾರಗಳು | 080–22340983 | 3–00 pm to 5-00 pm | - |
| 5 | ಜಂಟಿ ಮಹಾನಗರ ಆಯುಕ್ತರು | ಈ ಪ್ರಾಧಿಕಾರದ ಉದ್ದೇಶಿಸಿರುವ ಉಪನಗರಗಳ ಮತ್ತು ರಸ್ತೆಗಳ ಯೋಜನೆಗಳ ಕಾರ್ಯಗಳಲ್ಲಿ ಮಹಾನಗರ ಆಯುಕ್ತರಿಗೆ ಸಹಾಯ ಮಾಡುವುದು ಹಾಗೂ ಪ್ರಾಧಿಕಾರದ ಆಡಳಿತ ಮತ್ತು ಕಂದಾಯ ವಿಚಾರಗಳು | 080–22340983 | 3–00 pm to 5-00 pm | - |
| 6 | ಉಪ ಮಹಾನಗರ ಆಯುಕ್ತರು | ಪ್ರಾಧಿಕಾರದ ಆಡಳಿತ ಮತ್ತು ಕಂದಾಯ ವಿಚಾರಗಳು | 080–22340982 | 3–00 pm to 5-00 pm | - |
| 7 | ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು–1 | ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು | 080–22237214 | 3–00 pm to 5-00 pm | - |
| 8 | ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು–2 | ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳ ಸಾರ್ವಜನಿಕ ಮಾಹಿತಿ ಅಧಿಕಾರಿ & ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು | 080–22263479 | 3–00 pm to 5-00 pm | - |
| 9 | ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು | ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು | 080–22263479 | 3–00 pm to 5-00 pm | - |
| 10 | ಸಹಾಯಕ ಮಹಾನಗರ ಆಯುಕ್ತರು | ಆಡಳಿತ ಮತ್ತು ಕಂದಾಯ ವಿಚಾರಗಳ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಆಡಳಿತ ಮತ್ತು | 080–22205284 | 3–00 pm to 5-00 pm | - |

| | | | | | |
|---|---|---|---|---|---|
| | | ಕಂದಾಯ ವಿಚಾರಗಳಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು | | | |
| 11 | ಲೆಕ್ಕಾಧಿಕಾರಿಗಳು | ಲೆಕ್ಕಶಾಖೆಯ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಲೆಕ್ಕಶಾಖೆಗೆ ಸಂಬಂಧಿಸಿದ ವಿಚಾರಗಳ ಸಾರ್ವಜನಿಕ ಮಾಹಿತಿ ಅಧಿಕಾರಿ. | 080–22263479 | 3–00 pm to 5-00 pm | - |
| 12 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು–1 | ನಗರ ಮತ್ತು ಗ್ರಾಮಾಂತರ ವಿಚಾರಗಳಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು ಮತ್ತು ಈ ಪ್ರಾಧಿಕಾರದ ಅಂತರ್ಜಾಲವನ್ನು ಆಗಿಂದಾಗ್ಗೆ ನವೀಕರಿಸುವ ಕೆಲಸ. | 080–22340980 | 3–00 pm to 5-00 pm | - |
| 13 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು–2 | ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು | 080–22340980 | 3–00 pm to 5-00 pm | - |
| 14 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು–3 | ನಗರ ಮತ್ತು ಗ್ರಾಮಾಂತರ ಯೋಜನೆಯ ವಿಚಾರಗಳಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು | 080–22340980 | 3–00 pm to 5-00 pm | - |
| 15 | ತಹಸೀಲ್ದಾರ್ | ಆಡಳಿತ ಮತ್ತು ಕಂದಾಯ ವಿಚಾರಗಳಿಗೆ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು. | 080–22263479 | 3–00 pm to 5-00 pm | - |

**ನಮ್ಮ ಮುಂದಾಲೋಚನೆ:**
ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಯೋಜನೆಗಳನ್ನು ರೂಪಿಸುವುದು, ವಿವಿಧ ಇಲಾಖೆಗಳ ಸಮನ್ವಯ ಮತ್ತು ವ್ಯವಸ್ಥಿತವಾದ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು ಮತ್ತು ಸಂಬಂಧಿಸಿದ ವಿಚಾರಗಳು.

**ನಮ್ಮ ಧ್ಯೇಯೋದ್ದೇಶ:**
ಸಾರ್ವಜನಿಕರ ಜೀವನ ಮಟ್ಟದಲ್ಲಿ ಸುಧಾರಣೆಗಳನ್ನು ತರುವ ಸಲುವಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಉತ್ತೇಜನ ನೀಡುತ್ತೇವೆ.

**ನಮ್ಮ ಬದ್ಧತೆ:**
ನಮ್ಮ ದೈನಂದಿನ ಕಛೇರಿ ಕಾರ್ಯದಲ್ಲಿ ಪ್ರಾಮಾಣಿಕತೆ, ಪರಿಣಾಮಕಾರಿ, ದಕ್ಷತೆ, ಪಾರದರ್ಶಕತೆ, ವೃತ್ತಿಪರತೆ ಮತ್ತು ನಮ್ಮ ಕಾರ್ಯವೈಖರಿಯಲ್ಲಿ ಹೊಸತನವನ್ನು ರೂಢಿಸಿಕೊಂಡಿದೆ. ನಿಮ್ಮನ್ನು ಸೌಜನ್ಯದಿಂದ ನಡೆಸಿಕೊಳ್ಳಲಾಗುವುದು. ನಿಮ್ಮ ಎಲ್ಲಾ ಪ್ರಶ್ನೆಗಳಿಗೆ ತಡವಿಲ್ಲದೇ ಉತ್ತರಿಸಲಾಗುವುದು. ಸಾರ್ವಜನಿಕರಿಗೆ ಹತ್ತಿರವಾಗಿ ಕೆಲಸ ನಿರ್ವಹಿಸುತ್ತೇವೆ.

**ನಮ್ಮ ಪ್ರತಿಕ್ರಿಯೆ:**
ನಾವು ಕಛೇರಿ ವೇಳೆಯ ಭೇಟಿ ಸಮಯದಲ್ಲಿ ದೂರವಾಣಿ, ಫ್ಯಾಕ್ಸ್ ಮತ್ತುಖುದ್ದಾಗಿ ಸಾರ್ವಜನಿಕರಿಗೆ ಲಭ್ಯವಿರುತ್ತೇವೆ ಮತ್ತು ಯಾವುದೇ ಸಮಯದಲ್ಲಿ ಈ–ಮೇಲ್ ಕಳುಹಿಸಿಕೊಡಬಹುದಾಗಿದೆ.

**ಈ ಪ್ರಾಧಿಕಾರ ಒದಗಿಸುವ ಸೇವೆಗಳು:**

1. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.
2. ಭೂಸ್ವಾಧೀನದ ವಿವರಗಳನ್ನು ಅರ್ಜಿ ನೀಡಿದವರಿಗೆ ಒದಗಿಸುವುದು.

**ಸೇವೆಗಳ ಮಾನದಂಡ:**

| ಕ್ರ.ಸಂ. | ಒದಗಿಸಲಾಗುವ ಸೇವೆ | ನಿಗಧಿತ ಅಧಿಕಾರಿ | ಪರ್ಯಾಯ ಅಧಿಕಾರಿ | ಅರ್ಜಿಯ ವಿಧಾನ | ವಿಧಿಸಲಾದ ಸಮಯ |
|---|---|---|---|---|---|
| 1 | ಭೂಉಪಯೋಗ ಬದಲಾವಣೆ | ಮಹಾನಗರ ಯೋಜಕರು ಹಾಗೂ | ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ | ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಸ್ಥಳೀಯ | – |

| | | | | | |
|---|---|---|---|---|---|
| | | ನ.ಗ್ರಾ.ಯೋ ನಿರ್ದೇಶಕರು | ನಿರ್ದೇಶಕರು | ಯೋಜನಾ ಪ್ರದೇಶಗಳಿಂದ ಬರುವ ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ತಾಂತ್ರಿಕ ಅಭಿಪ್ರಾಯ ನೀಡುವುದು | |

**ಕುಂದು ಕೊರತೆಗಳ ಪರಿಹಾರದ ವ್ಯವಸ್ಥೆ:**

ನೀವು ಎಲ್ಲಾ ರೀತಿಯ ದಾಖಲೆಗಳನ್ನು ಒದಗಿಸಿ/ನಿಗಧಿತ ಶುಲ್ಕವನ್ನು ಪಾವತಿಸಿದ ನಂತರ ಮೇಲೆ ತಿಳಿಸಿದಂತೆ ವಿಧಿಸಲಾದ ಅವಧಿಯಲ್ಲಿ ನಿಮ್ಮ ಅರ್ಜಿ/ಪ್ರಸ್ತಾವನೆಗೆ ಪರಿಹಾರ ಲಭ್ಯವಾಗದಿದ್ದಲ್ಲಿ ಈ ಪ್ರಾಧಿಕಾರದ ಮಹಾನಗರ ಆಯುಕ್ತರನ್ನು ಈ ಬಗ್ಗೆ ಸಂಪರ್ಕಿಸಲು/ಭೇಟಿಯಾಗಿ ಕುಂದುಕೊರತೆಯನ್ನು ಪರಿಹರಿಸಿಕೊಳ್ಳಬಹುದಾಗಿದೆ.

**ನಿಮ್ಮ ಸಲಹೆ / ಸೂಚನೆಗಳಿಗೆ ನಾವು ಸ್ವಾಗತಿಸುವೆವು:**

ಈ ಪ್ರಾಧಿಕಾರದ ಮೇಲೆ ತಿಳಿಸಿದ ಸೇವೆಗಳ ಬಗ್ಗೆ ನಿಮಗೆ ಹೆಚ್ಚಿನ ಸೇವೆ ನೀಡಲು ನೀವು ನೀಡಬಹುದಾದ ಸಲಹೆ / ಸೂಚನೆಗಳನ್ನು ನಾವು ಸ್ವಾಗತಿಸುತ್ತೇವೆ.

**ಹೆಚ್ಚಿನ ಮಾಹಿತಿಗೆ :**

1. ಈ ಪ್ರಾಧಿಕಾರದ ವೆಬ್‌ಸೈಟ್: www.bmrda.kar.nic.inಅನ್ನು ಸಂದರ್ಶಿಸಬಹುದು.
2. ಪ್ರಾಧಿಕಾರದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

**ಮಹಾನಗರ ಆಯುಕ್ತರು,**
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ
ಪ್ರಾಧಿಕಾರ, ಬೆಂಗಳೂರು.

**2020–21**

ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 26(3)(ಬಿ) ರಡಿ ಈ ಪ್ರಾಧಿಕಾರದ ಸಾರ್ವಜನಿಕ ಪ್ರಾಧೀಕಾರಗಳ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಹುದ್ದೆ, ಕಚೇರಿ ವಿಳಾಸ, ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಶಾಖೆ | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 5(2)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 19(1)ರ ಪ್ರಕಾರ ಮೇಲ್ಮನವಿ ಅಧಿಕಾರಿ |
|---|---|---|---|---|
| 1 | ಆಡಳಿತ ಮತ್ತು ಕಂದಾಯ ಶಾಖೆ | ಸಹಾಯಕ ಮಹಾನಗರ ಆಯುಕ್ತರು | ತಹಶೀಲ್ದಾರ್ | ಉಪ ಮಹಾನಗರ ಆಯುಕ್ತರು |
| 2 | ನಗರ ಮತ್ತು ಗ್ರಾಮಾಂತರ ಯೋಜನಾ ಶಾಖೆ | ಉಪ ನಿರ್ದೇಶಕರು | ಸಹಾಯಕ ನಿರ್ದೇಶಕರು | ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು |
| 3 | ಲೆಕ್ಕ ಶಾಖೆ | ಲೆಕ್ಕಾಧಿಕಾರಿಗಳು | ಲೆಕ್ಕಾಧೀಕ್ಷಕರು | ಉಪ ಮಹಾನಗರ ಆಯುಕ್ತರು |

ಈ ಪ್ರಾಧಿಕಾರದ ದೂರವಾಣಿ ಸಂಖ್ಯೆ: 080–22263479, ಫ್ಯಾಕ್ಸ್ ಸಂಖ್ಯೆ: 080–22340981 ಇ–ಮೇಲ್: mc.bmrda@ka.gov.in & mc-bmrda@kar.nic.in ಕಛೇರಿ ವಿಳಾಸ: ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಎಲ್.ಆರ್.ಡಿ.ಇ. ಕಟ್ಟಡ, ನಂ.01, ಅಲಿ ಅಸ್ಕರ್ ರಸ್ತೆ, ಬೆಂಗಳೂರು–560052.